ಕೋರಿದ. ಅವನ ಮುಂದೆ ವಿವಿಧ ಭಕ್ಷ್ಯ ಭೋಜ್ಯಗಳೂ, ಪಾನೀಯಗಳೂ ಪ್ರತ್ಯಕ್ಷವಾದವು. ಭೋಜನ ಮುಗಿಸುವ ವೇಳೆಗೆ ಒಂದು ಡೇರೆ, ಅದರಲ್ಲಿ ಒಂದು ಸುಪ್ಪತ್ತಿಗೆ ತಯಾರಾಯಿತು. ಡೇರೆಯೊಳಗೆ ಸುಪ್ಪತ್ತಿಗೆಯ ಮೇಲೆ ಮಲಗಿ ಸುಖವಾಗಿ ನಿದ್ರಿಸಿ ಆಯಾಸ ಪರಿಹರಿಸಿಕೊಂಡ.

ನಿದ್ದೆಯಿಂದ ಎದ್ದ ಮೇಲೆ ಎರಡನೇ ತೆಂಗಿನಕಾಯಿ ಒಡೆದು ತಾನು ಅರಮನೆಗೆ ಹೋಗಲು ನುರಿತ ಸಾರಥಿಯಿರುವ ರಥವೊಂದನ್ನು ಕೋರಿಕೊಂಡ. ಅವನು ಕೇಳಿಕೊಂಡಂತಹ ಸುಂದರವಾದ ರಥವೊಂದು ಅವನ ಮುಂದೆ ಬಂದು ನಿಂತಿತು. ಕೇಶವ ಆ ರಥ ಹತ್ತಿದ ಕೂಡಲೆ ಸಾರಥಿ ಮಿಂಚಿನ ವೇಗದಲ್ಲಿ ಅವನ ಅರಮನೆಗೆ ತಲುಪಿಸಿದ. ಆದರೆ ಅಲ್ಲಿನ ಪರಿಸ್ಥಿತಿ ಅವನನ್ನು ದಿಗ್ಭ್ರಮೆಗೊಳಿಸಿತು. ಶತ್ರು ರಾಜ್ಯದವರು ಅವನ ರಾಜ್ಯವನ್ನು ಆಕ್ರಮಿಸಿ ಅವನ ತಂದೆ ಹಾಗೂ ಅಣ್ಣನನ್ನು ಬಂಧಿಸಿದ್ದರು. ಕೇಶವ ಅಲ್ಲಿಗೆ ಬರುತ್ತಲೇ ಅವನನ್ನೂ ಬಂಧಿಸಲು ಸೈನಿಕರು ಅವನತ್ತ ನುಗ್ಗಿ ಬಂದರು. ಕೂಡಲೆ ಕೇಶವ ಮೂರನೇ ತೆಂಗಿನಕಾಯಿಯನ್ನು ಒಡೆದು ತನಗೆ ಅತ್ಯಂತ ಪರಾಕ್ರಮಿಗಳಾದ, ಶಸ್ತ್ರ ಸಜ್ಜಿತರಾದ ಸೈನಿಕರ ಪಡೆ ಬೇಕೆಂದು ಕೋರಿದ. ತಕ್ಷಣವೇ ಅಪಾರ ಸಂಖ್ಯೆಯ ಸೈನಿಕರು ನಾಲ್ಕೂ ದಿಕ್ಕುಗಳಿಂದ ಬಂದು ಕೇಶವನ ಮುಂದೆ ನಿಂತರು. ಅವನ ಆಣತಿಯಂತೆ ಶತ್ರು ರಾಜ್ಯದ ಸೈನಿಕರೊಡನೆ ಯುದ್ಧ ಮಾಡಿ ಅವರನ್ನೆಲ್ಲ ಸೋಲಿಸಿ, ಓಡಿಸಿದರು.

ಕೇಶವ ತನ್ನ ತಂದೆ ಹಾಗೂ ಅಣ್ಣನನ್ನು ಬಂಧನದಿಂದ ಬಿಡುಗಡೆ ಮಾಡಿ ಅರಮನೆಗೆ ಕರೆತಂದ. ಕೇಶವ ತಾನು ಕಾಡಿನಲ್ಲಿ ಕಾಣೆಯಾದಾಗಿನಿಂದ ನಡೆದ ಘಟನೆಗಳನ್ನೆಲ್ಲ ತಂದೆ ಹಾಗೂ ಅಣ್ಣನಿಗೆ ವಿವರಿಸಿದ. ರಾಘವನಿಗೆ ತಮ್ಮನನ್ನು ಕಾಡಿನಲ್ಲಿ ಒಂಟಿಯಾಗಿ ಬಿಟ್ಟು ಬಂದಿದ್ದಕ್ಕೆ ಪಶ್ಚಾತ್ತಾಪವಾದರೂ, ಅದರಿಂದ ಒಳ್ಳೆಯದೇ ಆಯಿತೆಂದು ಸಂತೋಷಪಟ್ಟ. ನರೇಂದ್ರ ರಾಜ ಕೇಶವನೇ ತನ್ನ ಉತ್ತರಾಧಿಕಾರಿ ಎಂದು ತೀರ್ಮಾನಿಸಿದ. ರಾಘವನೂ ಅದಕ್ಕೆ ಸಂತೋಷದಿಂದ ಸಮ್ಮತಿಸಿದ.

ಕೇಶವ ನಾಲ್ಕನೆಯ ತೆಂಗಿನಕಾಯಿ ಒಡೆದು ತನಗೊಬ್ಬ ಶ್ರೇಷ್ಠ ಗುರುವೂ, ಸಕಲ ವಿದ್ಯೆಗಳನ್ನು ಕಲಿಯುವ ಸಾಮರ್ಥ್ಯವೂ ಬೇಕೆಂದು ಕೋರಿದ. ಅವನ ಇಚ್ಛೆಯಂತೆ ಸಕಲ ವಿದ್ಯಾ ಪ್ರವೀಣರಾದ ಗುರುಗಳು ದೊರೆತರು. ಅವನು ಎಲ್ಲಾ ವಿಧವಾದ ಶಸ್ತ್ರ ಹಾಗೂ ಶಾಸ್ತ್ರಗಳಲ್ಲಿ ಪಾರಂಗತನಾಗಿ ರಾಜನಾಗುವ ಪರಿಪೂರ್ಣತೆಯನ್ನು ಗಳಿಸಿದ.

ನರೇಂದ್ರ ಕೇಶವನಿಗೆ ವಿಜೃಂಭಣೆಯಿಂದ ಪಟ್ಟಾಭಿಷೇಕ ಮಾಡಿದ. ರಾಜನಾದ ಕೂಡಲೆ ಕೇಶವ ಐದನೆಯ ತೆಂಗಿನಕಾಯಿ ಒಡೆದು ತನ್ನ ರಾಜ್ಯಕ್ಕೆ ಅಪಾರವಾದ ಸಂಪತ್ತು ಮತ್ತು ಪ್ರಜೆಗಳ ಸುಖ, ಸಂತೋಷ ಮತ್ತು ನೆಮ್ಮದಿಗಳನ್ನು ಕೋರಿದ. ಅವನ ಇಚ್ಛೆಗಳೆಲ್ಲ ನೆರವೇರಿತು. ತಂದೆ ಹಾಗೂ ಅಣ್ಣನ ಮಾರ್ಗದರ್ಶನದಲ್ಲಿ ರಾಜ್ಯವನ್ನು ಬಹುಕಾಲ ಆಳಿದ.





**ಇಂಚರ ಆರ್‌ ರಾವ್**
7ನೇ ತರಗತಿ, ಸಾಗರ ವಿದ್ಯಾ ಮಂದಿರ, ಪಡುಬಿದ್ರಿ



**ಸುಹಾಸ ಮಾಗನೂರ**
5ನೇ ತರಗತಿ, ಗ್ರೀನ್ ಫೀಲ್ಡ್ ಪಬ್ಲಿಕ್ ಸ್ಕೂಲ್, ಬೆಂಗಳೂರು








**ನಿಖಿಲ್ ಪ್ರಸಾದ್ ಜೆ.ವಿ.**
4ನೇ ತರಗತಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಚನ್ನಪಟ್ಟಣ, ಸೊರಬ